ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ ಆಗಿರುವಂಥ ಕಾಮಗಾರಿಗಳಲ್ಲಿ ಇರುವಂಥ ದೋಷಗಳನ್ನೂ ಕೂಡ ಸರಿಪಡಿಸಬೇಕು ಎನ್ನುವ ವಿನಂತಿಯನ್ನು ಕೂಡ ಈ ಸಂದರ್ಭದಲ್ಲಿ ನಾನು ಮಾಡಲಿಚ್ಛಿಸುತ್ತೇನೆ ಕೊನೆಯದಾಗಿ, ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳಲ್ಲಿ ಊಟದ ವ್ಯವಸ್ಥೆ ಇಲ್ಲ ಎನ್ನುವುದನ್ನು ಕಳೆದ ಎರಡು ದಿವಸಗಳ ಹಿಂದೆ ಪ್ರಸ್ತಾಪ ಮಾಡಿದ್ದು, ಇವತ್ತಿಗೂ ಆ ಸಮಸ್ಯೆ ಪರಿಹಾರವಾಗಿಲ್ಲ, ಇವತ್ತಿಗೂ ಅದು ಕಂಟಿನ್ಯೂ ಆಗುತ್ತಿದೆ ಈ ಬಗ್ಗೆ ಸರ್ಕಾರ ಆದೇಶ ಕೊಟ್ಟಿದೆ ಎಂದು ಹೇಳುತ್ತಿದ್ದಾರೆ, ಆದರೆ ಇನ್ನೂ ಪ್ರಾರಂಭವಾಗಿಲ್ಲ ಹೀಗಾದರೆ, ಸರ್ಕಾರೀ ಆದೇಶಕ್ಕೆ ಏನು ಬೆಲೆ ಎನ್ನುವುದನ್ನೂ ಸಹ ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ ತಕ್ಷಣ ಅದನ್ನು ಸರಿಪಡಿಸಬೇಕು ಎಂದು ವಿನಂತಿ ಮಾಡುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಯೋಗೀಶ್ ಭಟ್‌ರವರು ಹೇಳಿದ ಹಾಗೆ ದಕ್ಷಿಣ ಕನ್ನಡದ ಆಸ್ಪತ್ರೆಗಳಲ್ಲಿ ಕೆಲಸ ಇನ್ನೂ ಮುಗಿದಿಲ್ಲ ಆದರೆ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ ಯಾರಾದರೂ ಅಧಿಕಾರಿ ಆ ರೀತಿ ತಪ್ಪು ಮಾಹಿತಿ ಕೊಟ್ಟಿದ್ದರೆ, ಅವರ ಮೇಲೆ ಕ್ರಮವನ್ನು ಜರುಗಿಸುತ್ತೇವೆ ಆದರೆ ಉಳಿಕೆ ಕೆಲಸಗಳನ್ನು ಮಾಡಿಸುವಂಥ ಕೆಲಸ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಪಡುತ್ತೇನೆ

ಶ್ರೀ ಎನ್ ಯೋಗೀಶ್ ಭಟ್ ಮಧ್ಯಾಹ್ನದ ಊಟದ ವ್ಯವಸ್ಥೆ ಸರ್ಕಾರೀ ಆಸ್ಪತ್ರೆಗಳಲ್ಲಿ, ಪಿಹೆಚ್‌ಸಿ ಗಳಲ್ಲಿ ಇದೆ ಎಂದು ಹೇಳಿದ್ದಾರೆ ಆದರ ಬಗ್ಗೆ ಆದೇಶ ಕೊಟ್ಟರೂ ಕೂಡ ಇದುವರೆಗೂ ಅದು ಸರಿಯಾಗಿ ಜಾರಿಯಾಗಿಲ್ಲ

ಶ್ರೀ ಕೆ ಶ್ರೀನಿವಾಸಗೌಡ ಸರ್ಕಾರಿ ಆಸ್ಪತ್ರೆಗಳಲ್ಲಿ ಊಟವನ್ನಂತೂ ಕೊಡುತ್ತಿದ್ದೇವೆ ಇವರು ಹೇಳುವ ರೀತಿ ಏನಾದರೂ ಆಗಿದ್ದರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಸೂಚನೆ ಕೊಡುತ್ತೇವೆ.

26 ವಿಷಯ ಕಮಲಾಪುರ ಕ್ಷೇತ್ರದಲ್ಲಿನ ಗ್ರಾಮಗಳಿಗೆ ರಸ್ತೆ ಸೌಕರ್ಯ ಮತ್ತು ಅವುಗಳ ನಿರ್ವಹಣೆ ಮಾಡುವ ಬಗ್ಗೆ

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) ಸನ್ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆಯಲ್ಲಿ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು ನನ್ನ ಕ್ಷೇತ್ರವಾದ ಕಮಲಾಪುರ ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು, ಇಡೀ ಗುಲ್ಬರ್ಗಾ ಜಿಲ್ಲೆಯಲ್ಲೇ ಅತ್ಯಂತ ಹಿಂದುಳಿದ ಕ್ಷೇತ್ರ ನಾನು ಈ ಅಧಿವೇಶನ ಮುಗಿಸಿ ಕ್ಷೇತ್ರಕ್ಕೆ ಹೋಗಬೇಕಾದರೆ ಭಯಭೀತನಾಗಿ ಹೋಗಬೇಕಾಗಿದೆ ಇದು ಗುಲ್ಬರ್ಗಾ ಜಿಲ್ಲೆಯ ಎಲ್ಲಾ ಶಾಸಕರಿಗೂ ಅನ್ವಯವಾಗಬಹುದು ಅಲ್ಲಿ ಎಲ್ಲಾ ರೋಡುಗಳೂ ಹದಗೆಟ್ಟಿವೆ ಯಾವ ರೋಡುಗಳಲ್ಲೂ ಸಹ ವಾಹನಗಳು ಓಡಾಡಲು ಬಹಳ ತೊಂದರೆಯಿದೆ ಚುನಾವಣಾ ಸಂದರ್ಭದಲ್ಲಿ ನಾನು ಕಮಲಾಪುರ, ಜೀವಣಗಿ, ಗೋಗಿ, ಬೇಲೂರುಗಳಿಗೆ ಹೋಗಿಲ್ಲ ಏಕೆಂದರೆ, ಯಾರು ಮತ ಕೇಳಲು ಬರುತ್ತಾರೋ ಅವರನ್ನು ಎಲ್ಲರೂ ಸೇರಿ ಜಗತ್ತಿ

ಶಾಸಕರನ್ನು ಕೂಡಿ ಹಾಕುತ್ತೇವೆ ಎಂದು ಹೆದರಿಸಿದ್ದರು ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ, ಕಮಲಾಪುರ, ಜೀವಣಗಿ, ಗೋಗಿ ರೋಡು, ಮಾರಗುತ್ತಿ ಕ್ರಾಸ್, ಸೊಂತ, ಚಂಟಾ ರೋಡು, ಅಲ್ಲಿಂದ ಆಳಂದ, ಮಟಕಿ, ನೀರಗುಡಿ ರೋಡು, ಹಜೂರಿ ಬಾರ್ಡರ್‌ನಿಂದ ಹೊದ್ಲೂರು, ನರಗುಂದ ರೋಡು, ಅಲ್ಲಿಂದ ಬಂಗರಗಾ ಕ್ರಾಸ್‌ನಿಂದ ಪೋತನಿಪುರದ ರೋಡು, ಇಂಥ ಹಲವಾರು ರೋಡುಗಳನ್ನು ಕಡೆಗಣಿಸಿದ್ದು, ಎಲ್ಲಾ ರೋಡುಗಳೂ ಹದಗೆಟ್ಟಿವೆ ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವ ಕ್ಷೇತ್ರದಲ್ಲಿ ಯಾವ ಹಳ್ಳಿಗೆ ಹೋಗಬೇಕೆಂದರೂ, ನಾವು ಸಧ್ಯ ಅಲ್ಲಿಗೆ ಹೋಗುವ ಪರಿಸ್ಥಿತಿಯಲ್ಲಿಲ್ಲ ನಾನೊಬ್ಬನೇ ಅಲ್ಲ, ಗುಲ್ಬರ್ಗಾ ಜಿಲ್ಲೆಯ ಎಲ್ಲಾ ಶಾಸಕರಿಗೂ ಇದು ಅನ್ವಯವಾಗಬಹುದು ರಸ್ತೆಗಳು ಬಹಳ ಹದಗೆಟ್ಟಿವೆ, ವಾಹನಗಳು ಓಡಾಡುವ ಸ್ಥಿತಿಯಲ್ಲಿಲ್ಲ ಅದಕ್ಕಾಗಿ ಸರ್ಕಾರ ಕೂಡಲೇ ಈ ರೋಡುಗಳನ್ನು ಸರಿಪಡಿಸುವ ಕ್ರಮ ಕೈಗೊಳ್ಳಬೇಕು, ನಮ್ಮಂಥ ಮುಗ್ಧ ಶಾಸಕರು ಹಳ್ಳಿಗಳಿಗೆ ಹೋಗಲು ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೇ, ಹಳ್ಳಿ ರಸ್ತೆಗಳ ಕೆಲಸಗಳನ್ನು ಜಿಲ್ಲಾ ಪಂಚಾಯತ್, ಎಸ್ ಜೆ ಆರ್ ವೈ, ಫುಡ್ ಫಾರ್ ವರ್ಕ್, ಅವುಗಳ ಮೂಲಕ ಕೆಲಸ ಮಾಡುತ್ತಿದ್ದೇವೆ ಅವು ಯಾವುದೇ ಸ್ಟೇಟ್ ರಸ್ತೆಗಳಾಗಲೀ ಅಥವಾ ನ್ಯಾಷನಲ್ ಹೈವೇಗಳಾಗಲೀ ಸರ್ಕಾರ ಅದಕ್ಕೆ ಗಮನ ಕೊಡುತ್ತದೆ ಆದರೆ ಇದು ಜಿಲ್ಲಾ ಪಂಚಾಯಿತಿ ರಸ್ತೆಗಳಾಗಿರುವುದರಿಂದ, ಹಳ್ಳಿ ಗಾಡಿನ ರಸ್ತೆಗಳಾಗಿರುವುದರಿಂದ, ಎಸ್‌ಜೆಆರ್‌ವೈನಲ್ಲಿ ನೀವೂ ಸದಸ್ಯರಾಗಿರುವುದರಿಂದ, ಎಸ್‌ಜೆಆರ್‌ವೈನಲ್ಲಿ ಏನು ಹಣ ಕೊಡುತ್ತಾರೆ, ಆ ಹಣವನ್ನು ಈ ರಸ್ತೆಗಳಿಗೆ ಹಾಕಿ ರಸ್ತೆಗಳನ್ನು ಮೂಡಿಸಬಹುದು ಆ ಹಣ ಸಾಲದಿದ್ದರೆ, ಏನಾದರೂ ಅಗತ್ಯವಿದ್ದರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ ಎಂದು ನಾನು ಅವರಿಗೆ ಹೇಳಲು ಬಯಸುತ್ತೇನೆ

27 ವಿಷಯ ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಿಂದ ಸಂಗ್ರಹಿಸಿದ ಶುಲ್ಕವನ್ನು ರೇಷ್ಮೆ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದ ಮೂಲಕ ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗಿಸುವ ಬಗ್ಗೆ

ಶ್ರೀ ಆರ್ ಧ್ರುವನಾರಾಯಣ (ಸಂತೇಮರಹಳ್ಳಿ) ಮಾನ್ಯ ಅಧ್ಯಕ್ಷರೇ, ಇವತ್ತು ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಬೆಳೆಗಾರರು, ರೀಲರ್‌ಗಳು, ಮೊಟ್ಟೆ ಉತ್ಪಾದಕರು, ನೇಕಾರರು ಇವರೆಲ್ಲರೂ ಬಹಳ ಸಂಕಷ್ಟದಲ್ಲಿದ್ದಾರೆ ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಕಲೆಕ್ಟ್ ಮಾಡುವ ಶುಲ್ಕದಿಂದ ಬರುವ ಹಣ ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತಿಲ್ಲ 1979ರಿಂದ ಇದುವರೆಗೆ, ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಿಂದ 246 ಕೋಟಿ ರೂಪಾಯಿಗಳ ಶುಲ್ಕ ಸಂಗ್ರಹಣೆಯಾಗಿದೆ ಈ ರೀತಿ